# ಆಧ್ಯಾತ್ಮಿಕ ಸಿದ್ಧಿ ಮತ್ತು ಕರ್ಮಕುಶಲತೆ

ಸ್ವಾಮಿ ಆತ್ಮವಿದಾನಂದ

**ಅತೀತ ಮತ್ತು ಪ್ರಸ್ತುತಗಳ ನಡುವೆ ಸಾಮರಸ್ಯವನ್ನು ಉಂಟುಮಾಡಿದುದು ವಿವೇಕಾನಂದರ ಒಂದು ಹಿರಿಯ ಕೊಡುಗೆ, ಮತ್ತು ಇದು ಆಧುನಿಕ ಆವಶ್ಯಕತೆಯೂ ಕೂಡ. ಈ ವಿಷಯವನ್ನು ಕುರಿತು ಚರ್ಚಿಸಿರುವ ಸ್ವಾಮಿ ಆತ್ಮವಿದಾನಂದಜಿಯವರು ಮೈಸೂರು ಶ್ರೀರಾಮಕೃಷ್ಣ ಆಶ್ರಮದ ಅಧ್ಯಕ್ಷರು.**

## ತಲೆಕೆರೆಯುವ ಸಮಸ್ಯೆ

ಆಧ್ಯಾತ್ಮಿಕ ಸಿದ್ಧಿಯೆಂಬುದು ಆಂತರಿಕ ಅನುಭವ, ಕರ್ಮಕುಶಲತೆ ಎನ್ನುವುದು ಬಹಿರಂಗವಾಗಿ ಎಲ್ಲರಿಗೂ ಎದ್ದು ಕಾಣುವಂಥದ್ದು —ಇದು ಎಲ್ಲರ ಒಂದು ಸಾಮಾನ್ಯ ಧೋರಣೆ. ಹೊರನೋಟಕ್ಕೆ ತೋರುವ, ಇವೆರಡರ ನಡುವಿನ "ಎಣ್ಣೆ-ಸೀಗೆಕಾಯಿ" ಸಂಬಂಧದಿಂದ ಉದ್ಭವಿಸಿದ ಒಂದು ಸಮಸ್ಯೆ ಪ್ರಾಯಶಃ ಎಲ್ಲರ ತಲೆ ತಿನ್ನುತ್ತದೆ. ಆದರೆ, ಆಧ್ಯಾತ್ಮಿಕ ಸಾಧಕನಾದವನಿಗೆ (ಆತ ಸಂನ್ಯಾಸಿಯಾಗಿರಲಿ ಅಥವಾ ಗೃಹಸ್ಥನಾಗಿರಲಿ) ಇವೆರಡೂ ಅಗತ್ಯ. ಆದ್ದರಿಂದ ವಿವೇಕಾನಂದ ವಿಚಾರಧಾರೆಯ ಬೆಳಕಿನಲ್ಲಿ ಇವುಗಳನ್ನು ಸಾಮರಸ್ಯಗೊಳಿಸುವುದು ಹೇಗೆಂಬ ಒಂದು ಸ್ಫುಟವಾದ ಚಿತ್ರಣವನ್ನು ಆತನು ಹೊಂದಬೇಕಾಗಿದೆ.

ಸ್ವಾಮಿ ವಿವೇಕಾನಂದರು ಮತ್ತೆ ಮತ್ತೆ ಸಾರಿ ಹೇಳುತ್ತಾರೆ "ಧರ್ಮವೆಂದರೆ ಸತ್ಯಸಾಕ್ಷಾತ್ಕಾರ". ಅವರ ಅಭಿಪ್ರಾಯದಲ್ಲಿ ಸಾಕ್ಷಾತ್ಕಾರವೆಂದರೆ ಮಾನವನಲ್ಲಿ ಹುದುಗಿಕೊಂಡಿರುವ ನೈಜ ಆಧ್ಯಾತ್ಮಿಕ ಸ್ವಭಾವದ ವ್ಯಕ್ತತೆ. "ಕೌಶಲ"ವೆಂದಾಕ್ಷಣ, ನಾವು ಭಾವಿಸುತ್ತೇವೆ, ನಮ್ಮ ಕ್ರಿಯಾಕಲಾಪಗಳಲ್ಲಿನ ಪರಿಪೂರ್ಣತೆ ಎಂದು. ಹೀಗಾಗಿ ಈಗ, ನಮಗೆ ನಾವೇ ಕೇಳಿಕೊಳ್ಳಬೇಕಾಗಿರುವ ಪ್ರಶ್ನೆಯೆಂದರೆ : ನಮ್ಮ ಒಳಗಿನ ಸುಪ್ತ ದೈವತ್ವವನ್ನು ವ್ಯಕ್ತಗೊಳಿಸುವ ಪ್ರಯತ್ನದಲ್ಲಿ ತೊಡಗಿರುವಾಗಲೇ, ನಮ್ಮ ದೈನಂದಿನ ಕ್ರಿಯಾಕಲಾಪಗಳಲ್ಲಿ "ಕೌಶಲ" ಅಥವಾ "ಪರಿಪೂರ್ಣತೆ"ಯನ್ನು ಸಿದ್ಧಿಸಿಕೊಳ್ಳುವುದು ಹೇಗೆ? ಎಂದು.

ಇಲ್ಲಿ ಕೆಲವು ಮೂಲಭೂತ ಪ್ರಶ್ನೆಗಳು ನಮ್ಮನ್ನು ಕಾಡಬಹುದು: ಮೊಟ್ಟ ಮೊದಲು, ಆ ಎರಡನ್ನು ಸಾಮರಸ್ಯಗೊಳಿಸಬೇಕಾದ ಅವಶ್ಯಕತೆಯಿದೆಯೆ? ಇಷ್ಟಾಗಿಯೂ, ಒಬ್ಬನೇ ವ್ಯಕ್ತಿಯಲ್ಲಿ ಈ ಎರಡು ಗುಣಗಳು ಸಾಮರಸ್ಯದಿಂದ ಇರಲು ಸಾಧ್ಯವೇ?

## ಸಮರವಲ್ಲ, ಸಾಮರಸ್ಯ!

ಸಾಮಾನ್ಯವಾಗಿ, ಧಾರ್ಮಿಕ ಅಥವಾ ಆಧ್ಯಾತ್ಮಿಕ ವ್ಯಕ್ತಿಯೆಂದರೆ ನಮಗೆ ಅರಿವಿಲ್ಲದ ಯಾವುದೋ ಒಂದು ಲೋಕದಲ್ಲಿ ವಿಹರಿಸುತ್ತ, ಬಾಹ್ಯ ವ್ಯಾವಹಾರಿಕ ಜಗತ್ತಿಗೆ ಮೂರುಕಾಸಿನ ಬೆಲೆಯನ್ನೂ ಕೊಡದವನೆಂಬ "ಜನಪ್ರಿಯ" ಅಭಿಪ್ರಾಯವಿದೆ. ಸನಾತನ ವೇದಾಂತಧರ್ಮವನ್ನು "ಕಾಡಿನ ಧರ್ಮ"ವೆಂದೂ ಈ "ಮಾಯಾಸೃಷ್ಟ ಮಿಥ್ಯಾ" ಪ್ರಪಂಚವನ್ನು ತೊರೆದಾಗ ಮಾತ್ರ ವೇದಾಂತದ ತುತ್ತತುದಿಯ ಜ್ಞಾನವನ್ನು ಹೊಂದಬಹುದೆಂದೂ ವ್ಯಾಖ್ಯಾನಗಳು ಪ್ರಚಲಿತವಾಗಿದ್ದವು. ಒಮ್ಮೆ ಆತ್ಮಸಾಕ್ಷಾತ್ಕಾರವಾಯಿತೆಂದರೆ, ಅನಾತ್ಮವಾದುದು ತ್ಯಾಜ್ಯವಾದ್ದರಿಂದ, ವೇದಾಂತಕಾಲೀನ ಋಷಿಯು, ಈ ಜಗತ್ತಿನ ಪೊಳ್ಳುತನವನ್ನು ಮನಗಂಡವನಾಗಿ, ಆತ್ಮರತನಾಗಿದ್ದುಬಿಡುತ್ತಿದ್ದನು. ಅಂತಹ ಆತ್ಮತೃಪ್ತನಿಗೆ, ಬಾಹ್ಯಚಟುವಟಿಕೆಗಳಲ್ಲಿ ಕೌಶಲವನ್ನು ಸಾಧಿಸುವ ಪ್ರಶ್ನೆ ಉದ್ಭವಿಸುವುದಾದರೂ ಹೇಗೆ?

ಇನ್ನೊಂದೆಡೆ, ತಮ್ಮ ತಮ್ಮ ಕಸುಬಿನಲ್ಲೇ ವ್ಯಸ್ತರಾಗಿ ಮೈಮರೆತ ಜನರು ಈ ಅಂತರ್ಮುಖತೆ ಅಥವಾ ಆಧ್ಯಾತ್ಮಿಕತೆಯು, ತಮ್ಮ ಉದ್ಯೋಗಸಾಮರ್ಥ್ಯವನ್ನು ಹಾಳುಮಾಡಿಬಿಡಬಹುದೆಂದು ಶಂಕಿಸುತ್ತಾರೆ. ಅವರ ಸಧ್ಯದ ಗುರಿ ತಮ್ಮ ತಮ್ಮ ಕ್ಷೇತ್ರದಲ್ಲಿ ದಕ್ಷತೆಯನ್ನು ಸಾಧಿಸುವುದೇ ಆಗಿರುವುದರಿಂದ ಇಂತಹ ಧಾರ್ಮಿಕತೆ-ಆಧ್ಯಾತ್ಮಿಕತೆಗಳೆಡೆಗೆ ತಮ್ಮ ಮನಸ್ಸನ್ನು ಹರಿಯಬಿಟ್ಟರೆ ತಮ್ಮ ಧ್ಯೇಯೋಧ್ದೇಶ ಸಿದ್ಧಿಗೆ ಕುತ್ತು ಬರಬಹುದೆಂದು ಅವರ ಎಣಿಕೆ. ಧರ್ಮದ ಕುರಿತು ತಿರಸ್ಕಾರ ಮನೋಭಾವ ಇಲ್ಲದಿದ್ದರೂ ತಮ್ಮ ಪ್ರಾಣಶಕ್ತಿ ಬತ್ತಿಹೋಗುವ ಸಮಯಕ್ಕೆ ಇಂಥವುಗಳನ್ನು ಇಟ್ಟುಕೊಳ್ಳೋಣವೆಂಬುದು ಅವರ ಪ್ರಾಮಾಣಿಕ ನಿಲುವು; ಒಟ್ಟಿನಲ್ಲಿ ಹೇಳಬೇಕಾದರೆ, ಈ ಧರ್ಮ-ಆಧ್ಯಾತ್ಮಿಕತೆಗಳೆಲ್ಲ ತಮ್ಮ "ವಿಶ್ರಾಂತಿ-ವೇತನ"ದ ಸಹಚರರೆಂಬುದೇ ಅವರ ಅನಿಸಿಕೆ!

ಆದರೆ, ವಿವೇಕಾನಂದರ ವಿನೂತನ ವೇದಾಂತದ ಅರ್ಥನಿರೂಪಣೆಗಳಿಂದ ಹಾಗೂ ಆಧ್ಯಾತ್ಮಿಕ ಆಸರೆಯ ಅನಿವಾರ್ಯತೆಯನ್ನು ಇತ್ತೀಚೆಗೆ ಕಂಡುಕೊಂಡಿರುವ, ಕೌಶಲ ಸಾಧನೆಯನ್ನೇ ಉದ್ದೇಶವಾಗಿಟ್ಟುಕೊಂಡ ವ್ಯವಸ್ಥಾಪನ ತಜ್ಞರಿಂದ, ಮೇಲಿನ ಚಿತ್ರಣವು ಬಹುಮಟ್ಟಿಗೆ ಬದಲಾಗಿದೆ. ಶ್ರೀರಾಮಕೃಷ್ಣರ ಉಪದೇಶಾನುಭವಗಳನ್ನು ಆಧರಿಸಿ, ಸ್ವಾಮಿ ವಿವೇಕಾನಂದರು ವೇದಾಂತಿ ಸಂನ್ಯಾಸಿಗಳಿಗೆ, ಲೋಕಹಿತಗೈಯುವ, ನರನಲ್ಲಿ ನಾರಾಯಣನನ್ನು ಕಾಣುವ, ಜೀವನಲ್ಲಿ ಶಿವನನ್ನು ಆರಾಧಿಸುವ ಕರೆ ಕೊಟ್ಟಿದ್ದಾರೆ. ಮತ್ತೊಂದೆಡೆ, ಆಧುನಿಕ ವ್ಯವಸ್ಥಾಪನ ತಜ್ಞರು ದಕ್ಷತೆಯನ್ನು ಸಾಧಿಸಬೇಕೆಂಬ ಹೊಯ್ದಾಟದಿಂದ ಅದಾಗಲೇ ಅಶಾಂತಿಯ ಪಂಕದಲ್ಲಿ ಸಿಕ್ಕಿ ಒದ್ದಾಡುತ್ತಿರುವ ತಮ್ಮ ಮನಸ್ಸಿಗೆ ಶಾಂತಿಯನ್ನು ನೀಡಲು ಕೆಲವು ಗುಟುಕಿನ ಆಧ್ಯಾತ್ಮಿಕ ಸುಧೆಗಾಗಿ ಬಾಯಿ ತೆರೆದು ಕುಳಿತಿದ್ದಾರೆ. ಪೌರಸ್ತ್ಯ ಹಾಗೂ ಪಾಶ್ಚಾತ್ಯ

ದೇಶಗಳಲ್ಲಿ ಈಗೀಗ ಹೆಚ್ಚುತ್ತಿರುವ ಧ್ಯಾನ-ಯೋಗಗಳ ಹುಚ್ಚೇ ಮೇಲಿನ ಮಾತಿಗೆ ಪುಷ್ಟಿ. ಅತಿವೇಗವಾಗಿ ಬದಲಾಗುತ್ತಿರುವ ಇಂತಹ ಪರಿಸ್ಥಿತಿಯಲ್ಲಿ, ಈ ಎರಡೂ ಕ್ಷೇತ್ರಗಳ ನಡುವೆ ಸಾಮರಸ್ಯವನ್ನು ತುರ್ತಾಗಿ ತರಬೇಕಾಗಿದೆ.

### ಭಗವದ್ಗೀತಾ ಮತ್ತು ಶ್ರೀಶಂಕರರ ಭಾಷ್ಯ

ಸಮಗ್ರ ಸಾಮರಸ್ಯದ "ಸರಿಗಮ"ವನ್ನು ಈ ಭಗವದ್ಗೀತೆ ಹಾಡುತ್ತದೆ. ಕಾರಣ, ಇದು ಸಾಕ್ಷಾತ್ ಸಮನ್ವಯಮೂರ್ತಿಯಾದ ಭಗವಾನ್ ಶ್ರೀಕೃಷ್ಣನ ಕಂಠದಿಂದ ಹೊರಬಂದಿದೆ. ಆಧ್ಯಾತ್ಮಿಕ ಅನುಭವವು ಹೇಗೆ ಕರ್ಮದಲ್ಲಿ ಕೌಶಲರೂಪದಿಂದ ವ್ಯಕ್ತವಾಗುತ್ತದೆ, ಒಂದು ಇನ್ನೊಂದಕ್ಕೆ ಹೇಗೆ ಪ್ರೇರಕ-ಪೂರಕ, ಹೇಗೆ ವ್ಯಕ್ತಿಯ ಅಭಿವ್ಯಕ್ತ ಗುಣಗಳಿಂದ ಆತನಿಗೆ ಆಧ್ಯಾತ್ಮಿಕ ಸಿದ್ಧಿ ಲಭಿಸಿದೆಯೊ ಇಲ್ಲವೊ ಎಂಬುದನ್ನು ತಿಳಿದುಕೊಳ್ಳುವುದು — ಇವುಗಳನ್ನು ಶ್ರೀಕೃಷ್ಣ ಅರ್ಜುನನಿಗೆ ಉಪದೇಶಿಸುತ್ತಾನೆ.

ಕುರುಕ್ಷೇತ್ರದ ವಿಷಮ ಪರಿಸ್ಥಿತಿಯಲ್ಲಿ ಅರ್ಜುನ ತನ್ನೆದುರಿಗೆ ನಿಂತಿದ್ದ ಬಂಧುಬಾಂಧವರನ್ನೂ, ಮಹಾಸೈನ್ಯವನ್ನೂ ಕಂಡು ಹೃದಯದೌರ್ಬಲ್ಯದಿಂದ ತತ್ತರಿಸಿ ಹೋಗಿದ್ದನು. ಶ್ರೀಶಂಕರರು ಇಲ್ಲಿ ವ್ಯಾಖ್ಯಾನ ನೀಡುತ್ತ, ಅರ್ಜುನನಿಗೆ ಮೋಹವುಂಟಾದ್ದರಿಂದ ಶೋಕ ಅದನ್ನನುಸರಿಸಿ ಬಂತೆಂದು ಹೇಳುತ್ತಾರೆ. ಮಾನವನ ನೈಜ ಆಧ್ಯಾತ್ಮಿಕ ನೆಲೆಯ ಪರಿಚಯವನ್ನು ಶ್ರೀಕೃಷ್ಣ ಅರ್ಜುನನಿಗೆ ಮಾಡಿಸಿದ ಮೇಲೆ, ಆತನ ಶೋಕ-ಮೋಹಗಳು ಚೆದುರಿಹೋಗಿ, ಆತ ಎಂದಿನ "ಗಾಂಡೀವ" ಹಿಡಿದ "ಗಂಡಾ"ಗುತ್ತಾನೆ. ಆಧ್ಯಾತ್ಮಿಕ ಅರಿವಿನಿಂದ ವ್ಯಕ್ತಿ ಹೇಗೆ ಸ್ವಧರ್ಮದಲ್ಲಿ ಕೌಶಲಶಿಖರಕ್ಕೇರುತ್ತಾನೆ ಎಂಬುದಕ್ಕೆ ಉದಾಹರಣೆ ಇದು.

"ಸ್ಥಿತಪ್ರಜ್ಞ"ನ ಲಕ್ಷಣಗಳೇನು? ಎಂದು ಅರ್ಜುನ ಪ್ರಶ್ನಿಸುತ್ತಾನೆ. ಈ ಪ್ರಶ್ನೆಯ ಹಿಂದಿರುವ ಉದ್ದೇಶ : ತತ್ತ್ವಜ್ಞಾನ-ಅನುಭವಗಳೆಲ್ಲ ಆಂತರ್ಯದ ಮಾತು, ಇವುಗಳು ಆ ವ್ಯಕ್ತಿಯಲ್ಲಿ ಹೊರಗೆ ವ್ಯಕ್ತವಾಗುತ್ತವೆಯೊ, ಹೇಗೆ? ಬಾಹ್ಯಾಭ್ಯಂತರ ಸಾಮರಸ್ಯವನ್ನು ನಾವು ಕಾಣುವುದು ಇಲ್ಲೇ. ಅದಕ್ಕೆ ಉತ್ತರವಾಗಿ ಎರಡನೆಯ ಅಧ್ಯಾಯದ ಅಂತಿಮಭಾಗದಲ್ಲಿ ಶ್ರೀಕೃಷ್ಣ ಸವಿಸ್ತಾರವಾಗಿ ಸ್ಥಿತಪ್ರಜ್ಞನ ಲಕ್ಷಣಗಳನ್ನು ಹೇಳುತ್ತಾನೆ. ಶ್ರೀಕೃಷ್ಣ ಶೋಕಗ್ರಸ್ತ ಅರ್ಜುನನಿಗೆ ಸಮಾಧಾನ ನೀಡುವ ಕೆಲವು ನುಡಿಗಳನ್ನಾಡುವುದು ಬಿಟ್ಟು, ಆತ್ಮನಿರೂಪಣೆಯನ್ನೂ, ಸ್ಥಿತಪ್ರಜ್ಞನ ಲಕ್ಷಣಗಳನ್ನೂ ಉಪದೇಶಿಸಿದ್ದು ಏಕೆ ಎಂಬ ಮತ್ತೊಂದು ಪ್ರಶ್ನೆ ಉದ್ಭವಿಸುತ್ತದೆ. ಇಲ್ಲಿ ಭಾಷ್ಯಕಾರರಾದ ಶ್ರೀಶಂಕರರು ಹೇಳುತ್ತಾರೆ, ಸ್ಥಿತಪ್ರಜ್ಞನಿಗೆ ಯಾವುವು ಲಕ್ಷಣಗಳೊ, ಅವೇ ಆ ಉನ್ನತ ಸ್ಥಿತಿಗಾಗಿ ಪ್ರಯತ್ನಿಸುತ್ತಿರುವ ಸಾಧಕನಿಗೆ ಸಾಧನಗಳು. ಇದನ್ನೇ ಇತ್ತೀಚಿನ ಕಾಲದಲ್ಲಿ "ಅನುಕರಣೆ" (emulation) ಎಂಬ ಪಾರಿಭಾಷಿಕ ಶಬ್ದದಿಂದ ಕರೆಯುತ್ತಾರೆ. ಸಾಧಕನು ಸಿದ್ಧನ ಲಕ್ಷಣಗಳನ್ನು ಅನುಕರಿಸುತ್ತ, ಅವುಗಳನ್ನೇ ತನ್ನ ಸ್ವಭಾವವನ್ನಾಗಿ ಮಾಡಿಕೊಳ್ಳುತ್ತಾನೆ. ಈ ಆತ್ಮನಿರೂಪಣೆಯಲ್ಲಾಗಲಿ, ಸ್ಥಿತಪ್ರಜ್ಞಲಕ್ಷಣಗಳ ವಿವರಣೆಯಲ್ಲಾಗಲಿ ನಾವು ಮುಖ್ಯವಾಗಿ ಗಮನಿಸಬೇಕಾದ ಅಂಶ ನಿರ್ಲಿಪ್ತತೆ. ನಮ್ಮ ದೈನಂದಿನ ಕೆಲಸ ಕಾರ್ಯದ ಹಿಂದೆ ಈ ನಿರ್ಲಿಪ್ತತೆ ಇದ್ದರೆ ಆಗ ಮನಶ್ಶಾಂತಿಯನ್ನು ಉಳಿಸಿಕೊಳ್ಳಲು ಸಾಧ್ಯವಾಗುತ್ತದೆ.

> **ನಾವು ನಮ್ಮ ಮನಸ್ಸಿನ ಒಡೆಯರಂತೆ ಕೆಲಸ ಮಾಡಿದರೆ ನಿರ್ಲಿಪ್ತತೆಯ ಆನಂದ ನಮ್ಮದಾಗುತ್ತದೆ.**
>
> *—ಸ್ವಾಮಿ ವಿವೇಕಾನಂದ*

### ಶ್ರೀರಾಮಕೃಷ್ಣ ವಿವೇಕಾನಂದರ ಬೆಳಕಿನಲ್ಲಿ

ಸ್ವಾಮಿ ವಿವೇಕಾನಂದರು ಹೇಳುತ್ತಾರೆ, "ಬೆಸ್ತನೊಬ್ಬನು ತಾನು ಆತ್ಮ ಎಂದು ಭಾವಿಸುವುದಾದಲ್ಲಿ ಆತನೊಬ್ಬ ಉತ್ತಮ ಬೆಸ್ತನಾಗಬಲ್ಲ, ಹಾಗೆಯೇ ವಿದ್ಯಾರ್ಥಿಯೊಬ್ಬ ತಾನು ಆತ್ಮ ಎಂಬುದಾಗಿ ಭಾವಿಸಿದಲ್ಲಿ ಆತನೊಬ್ಬ ಉತ್ತಮ ವಿದ್ಯಾರ್ಥಿಯಾಗಬಲ್ಲ". ಶ್ರೀರಾಮಕೃಷ್ಣರು, "ಒಬ್ಬ ನಿಪುಣ ನರ್ತಕನು ಎಂದಿಗೂ ತಪ್ಪು ಹೆಜ್ಜೆ ಇಡಲಾರ" ಎಂದಿದ್ದಾರೆ. ಈ ಎರಡು ಹೇಳಿಕೆಗಳೂ ಸ್ಥಿತಪ್ರಜ್ಞನನ್ನು ಕುರಿತು ಮೇಲೆ ನಡೆಸಿದ ನಮ್ಮ ಪರ್ಯಾಲೋಚನೆಯ ಸಾಲಿಗೇ ಸೇರುತ್ತವೆ. ಸ್ವಾಮೀಜಿ ಹೇಳುವ "ನಮ್ಮೊಳಗಿನ ದೈವತ್ವದ ವ್ಯಕ್ತತೆ"ಗೆ, ನಮ್ಮೆಲ್ಲ ಸಹಜಪ್ರವೃತ್ತಿಗಳ ಶುದ್ಧೀಕರಣ ಅತ್ಯಗತ್ಯ. ಪಾತಂಜಲ ಯೋಗದ ಯಮನಿಯಮಗಳು, ವೇದಾಂತದ ಸಾಧನ-ಚತುಷ್ಟಯ, ಭಕ್ತಿಶಾಸ್ತ್ರಗಳ ವಿವೇಕ-ವಿಮೋಕಾದಿಗಳ ಆಚರಣೆಗಳೇ ಈ ಶುದ್ಧೀಕರಣಕ್ಕೆ ಸಾಧನಗಳು. ಸಾಧಕನಾದವನು ತನ್ನ ಸಾಧನೆಯ ಕಾಲದಲ್ಲಿ ತೊಡುವ ಅಹಿಂಸಾ-ಸತ್ಯಾದಿ ವ್ರತಗಳನ್ನು ಅಪ್ರಮತ್ತನಾಗಿ, ಸತತ ಪ್ರಯತ್ನದಿಂದ ಆಚರಿಸಿದಲ್ಲಿ, ಅವುಗಳು ಅವನ ಸ್ವಭಾವವೇ ಆಗಿಬಿಡುತ್ತವೆ.

ಗೀತೆಯಲ್ಲಿ ಶ್ರೀಕೃಷ್ಣನು "ಯೋಗ" ಶಬ್ದಕ್ಕೆ ಅದ್ಭುತವಾದ ನಿರ್ವಚನ ನೀಡುತ್ತ ಹೇಳುತ್ತಾನೆ: **ಯೋಗಃ ಕರ್ಮಸು ಕೌಶಲಮ್**— ಯೋಗವು ಕರ್ಮಗಳಲ್ಲಿ ಕೌಶಲ. ಎಷ್ಟರಮಟ್ಟಿಗೆ ನಾವು ನಮ್ಮ ಉನ್ನತ ಸ್ವಭಾವದೊಂದಿಗೆ ಅಥವಾ ಆ ನಮ್ಮ ದೈವತ್ವದೊಂದಿಗೆ ಸಂಪರ್ಕ ಬೆಳೆಸಿರುತ್ತೇವೆಯೊ, ಅಷ್ಟಷ್ಟು ನಮ್ಮ ಕರ್ಮದಲ್ಲಿ ಕೌಶಲ ವ್ಯಕ್ತವಾಗುತ್ತಿರುತ್ತದೆ. ವಾಸ್ತವವಾಗಿ, ಕರ್ಮವೇ ಆ ಸಂಪರ್ಕಕ್ಕೆ ಸಾಧನವಾಗುತ್ತದೆ. ಆಗ, ನಮ್ಮ ಉನ್ನತ ಸ್ವಭಾವದೊಂದಿಗಿನ ಸಂಪರ್ಕ ಅಥವಾ "ದೈವತ್ವದ ಅಭಿವ್ಯಕ್ತಿ"ಯೇ ನಮ್ಮ ಎಲ್ಲ ಚಟುವಟಿಕೆಗಳಲ್ಲಿಯೂ ಪರಿಪೂರ್ಣತೆಯ ರೂಪಿನಿಂದ ಅಥವಾ ಕೌಶಲದ ರೂಪಿನಿಂದ ವ್ಯಕ್ತವಾಗುತ್ತದೆ ಮತ್ತು ಎಲ್ಲ ಚಟುವಟಿಕೆಗಳೂ ಆ ಅಭಿವ್ಯಕ್ತಿಯ ಸಾಧನವಾಗುತ್ತವೆ. ಸ್ವಾಮೀಜಿಯವರ ಕೃತಿಶ್ರೇಣಿಯ ಮುನ್ನುಡಿಯಲ್ಲಿ ನಿವೇದಿತೆ ಹೀಗೆ ಬರೆಯುತ್ತಾಳೆ: "ಎಲ್ಲ ರೀತಿಯ ಪೂಜೆ ಮಾತ್ರವಲ್ಲದೆ, ಎಲ್ಲ ಬಗೆಯ ಕೆಲಸವೂ, ಎಲ್ಲ ಬಗೆಯ ಹೋರಾಟವೂ, ಎಲ್ಲ ವಿಧದ

ಸೃಷ್ಟಿಯೂ ಸಾಕ್ಷಾತ್ಕಾರದ ಮಾರ್ಗಗಳಾಗುತ್ತವೆ. ಲೌಕಿಕ ಮತ್ತು ಪಾರಮಾರ್ಥಿಕ ಎಂಬ ಭೇದ ಇನ್ನಿಲ್ಲ. ದುಡಿಮೆಯೇ ಪ್ರಾರ್ಥನೆ, ಆತ್ಮವಿಜಯವೇ ತ್ಯಾಗ, ಜೀವನವೇ ಧರ್ಮ. ವಸ್ತುಗಳನ್ನು ಪಡೆದಿಟ್ಟುಕೊಳ್ಳುವುದು ಬಿಟ್ಟುಬಿಡುವಷ್ಟೇ ವಿಶ್ವಸನೀಯ."

### ಕೌಶಲದ ಒಳ – ಹೊರ ಆಯಾಮಗಳು

ಈಗ ಕೌಶಲದ ಒಳ-ಹೊರ ಆಯಾಮಗಳನ್ನು ಪರಿಶೀಲಿಸಿ ನೋಡೋಣ. ಹೊರಗೆ ಕಾಣುವ ಕೌಶಲವನ್ನು ಸುಲಭವಾಗಿ ಗುರುತಿಸಬಹುದು. ಆದರೆ ಒಳಗಿನ, ಬಾಹ್ಯಕೌಶಲಕ್ಕೆ ಆಧಾರವಾದ ಈ ಆಂತರಿಕ ಕೌಶಲವನ್ನು ಕಾಣುವುದು ಸುಲಭದ ಮಾತೇನಲ್ಲ. ದಕ್ಷ ಕಾರ್ಮಿಕರನ್ನು, ವ್ಯವಸ್ಥಾಪಕರನ್ನು ಅಥವಾ ವೈದ್ಯರೇ ಮೊದಲಾದವರನ್ನು ಬಾಹ್ಯ ರೀತಿಯ ಶಿಕ್ಷಣಗಳಿಂದ "ತಯಾರು" ಮಾಡಬಹುದೇನೊ. ಆದರೆ ನಾವೇ ನೋಡುತ್ತಿರುವಂತೆ ಬಾಹ್ಯ ಶಿಕ್ಷಣಗಳು ಆಂತರಿಕ ಕೌಶಲದ ಮೇಲೆ ಬೀರುವ ಪ್ರಭಾವ ಅತ್ಯಲ್ಪ—ಶೂನ್ಯವೆಂದರೂ ಸರಿಯೇ. ಆಂತರಿಕ ಕೌಶಲದ ಲಕ್ಷಣಗಳಾದ ಸಮಚಿತ್ತತೆ, ಆಂತರಿಕ ಪರಿಶುದ್ಧಿ, ಆಂತರಿಕ ಪರಿಪೂರ್ಣತೆ, ತನ್ನ ಉನ್ನತ ಪ್ರಕೃತಿಯೊಂದಿಗೆ ಸಂಪರ್ಕವನ್ನು ಹೊಂದುವುದು—ಇವುಗಳನ್ನು ಬಾಹ್ಯ ರೀತಿಯ ಶಿಕ್ಷಣಗಳು ಸಾಧಿಸಲಾರವು. ಅಷ್ಟೇ ಅಲ್ಲದೆ, ಕಾರ್ಮಿಕನ ವ್ಯಕ್ತಿತ್ವದಲ್ಲಿ ಯಾವ ಪರಿವರ್ತನೆಯೂ ಉಂಟಾಗದೆ, ಕೇವಲ ಆತನ ಬಾಹ್ಯ ಕೌಶಲದಿಂದ ಅನರ್ಥವೇ ಹೆಚ್ಚು ಎಂಬ ಅರಿವು ಇತ್ತೀಚಿಗೆ ಪ್ರಪಂಚದಾದ್ಯಂತ ಮೂಡುತ್ತಿದೆ. ಹೆಚ್ಚುತ್ತಿರುವ ಬಾಹ್ಯ ಚಟುವಟಿಕೆಗಳಿಂದ ಮಾನವ ಸಮಾಜವು ಮಾನಸಿಕ ಅಸ್ಥಿರತೆ, ಕ್ರೌರ್ಯ, ದ್ವೇಷ, ಅಸೂಯೆ, ಅಸಹನೆ ಹಾಗೂ ಯುದ್ಧಗಳತ್ತ ಸಾಗುತ್ತಿದೆ. ಮಾನವನ ಉನ್ನತ ಆಧ್ಯಾತ್ಮಿಕ ಅಸ್ತಿತ್ವದಲ್ಲಿ ಶ್ರದ್ಧೆ ಇಡುವುದರಿಂದ ಆತನು ಜಗತ್ತಿನ ಚಾಲಕಶಕ್ತಿಯಾದ ಭಗವಂತನೆಡೆಗೆ ಮುನ್ನಡೆಯುವನು. ಇಂತಹ ದೃಢವಾದ ನಂಬಿಕೆಯು ವ್ಯಕ್ತಿತ್ವದಲ್ಲಿ ಒಂದು ಆಂತರಿಕ ಪರಿವರ್ತನೆ ಅಥವಾ ಮಹತ್ತಾದ ಆಂತರಿಕ ಪರಿಶುದ್ಧಿಯನ್ನುಂಟು ಮಾಡುತ್ತದೆ. ಈ ಪರಿಶುದ್ಧ ದೃಷ್ಟಿಯಿಂದ ವ್ಯಕ್ತಿಯು—ಅವನ ಮಾನವತೆಯ ಸೇವೆಯನ್ನೇ ಮಾಡುತ್ತಿರಲಿ, ಕಲೆ, ಸಂಗೀತ, ಸಂಸ್ಕೃತಿಯೇ ಮೊದಲಾದ ಕ್ಷೇತ್ರಗಳಲ್ಲೇ ತೊಡಗಿರಲಿ—ಯಾವ ವೈಯಕ್ತಿಕ ಹಿತಾಸಕ್ತಿಯನ್ನೂ ಹೊಂದದೆ, ಭಗವದರ್ಪಣ ಬುದ್ಧಿಯಿಂದ ಮಾಡಲು ಸಹಾಯವಾಗುತ್ತದೆ. ಇಂತಹ ಕರ್ಮ ಯಾವಾಗಲೂ ಪ್ರೇಮದಿಂದ ಪ್ರೇರೇಪಿತವಾಗಿರುತ್ತದೆ. ಈ ಆಂತರಿಕ ಪರಿವರ್ತನೆಯಿಂದ ಕರ್ಮಿಯು ತನ್ನೆಲ್ಲ ಕೆಲಸಗಳನ್ನು, ಈ ಸಾಪೇಕ್ಷ ಜಗತ್ತಿನಲ್ಲಿ ಅದೆಷ್ಟು ಕುಶಲತೆಯಿಂದ ಮಾಡಲು ಸಾಧ್ಯವೊ, ಅಷ್ಟು ಕೌಶಲದಿಂದ, ಪ್ರಯತ್ನವಿಲ್ಲದೆಯೆ ಮಾಡಬಹುದಾದಂಥ ಪ್ರಚಂಡ ಆದರೆ ಸೌಮ್ಯವಾದ ಶಕ್ತಿಯೊಂದು ಆತನಿಗೆ ಲಭಿಸುತ್ತದೆ. ಅಂತಹ ವ್ಯಕ್ತಿಯು ಈಗ ಒಬ್ಬ ನುರಿತ ನರ್ತಕನಂತೆ ಆಗುತ್ತಾನೆ — ಎಂದಿಗೂ ತಪ್ಪು ಹೆಜ್ಜೆ ಇಡಲಾರ!

---

**ಯಥಾರ್ಥವಾದ ಪ್ರೇಮದ್ವಾರಾ ಮಾಡಿದ ಕಾರ್ಯದ ಫಲವಾಗಿ ಸುಖವುಂಟಾಗುತ್ತದೆ. ಯಾವ ಕಾರ್ಯದ ಪ್ರತಿಫಲವಾಗಿ ಶಾಂತಿಯೂ ಆನಂದವೂ ಜನಿಸವೊ ಅದು ಯಥಾರ್ಥವಾಗಿಯೂ ಪ್ರೇಮದಿಂದ ಮಾಡಿದ ಕಾರ್ಯವಾಗಿರಲಾರದು.**

*—ಸ್ವಾಮಿ ವಿವೇಕಾನಂದ.*

---

### ಕಠೋಪನಿಷತ್ತಿನ ಅದ್ಭುತ ಕಲ್ಪನೆ

ದೈವತ್ವದ ವ್ಯಕ್ತತೆಯೆಡೆಗೆ ಸಾಗುವ ನಮ್ಮ ಆಂತರಿಕ ಪ್ರಯಾಣದ ಪ್ರಕ್ರಿಯೆಗಳನ್ನು ಕಠೋಪನಿಷತ್ತು ಸುಂದರವಾದ ರಥದ ಕಲ್ಪನೆಯ ಮೂಲಕ ವಿವರಿಸುತ್ತದೆ. ಆತ್ಮನೇ ರಥಿ, ಶರೀರವೇ ರಥ, ಬುದ್ಧಿಯೇ ಸಾರಥಿ, ಮನಸ್ಸೇ ಕಡಿವಾಣ, ಕುದುರೆಗಳು ಜ್ಞಾನೇಂದ್ರಿಯಗಳು ಮತ್ತು ವಿಷಯವಸ್ತುಗಳೇ ಅವುಗಳ ಕಾರ್ಯಕ್ಷೇತ್ರ. ಸಾರಥಿಯಾದ ಬುದ್ಧಿಯು ಅಪ್ರಮತ್ತನಾಗಿದ್ದು, ಮನಸ್ಸೆಂಬ ಕಡಿವಾಣವನ್ನು ಭದ್ರವಾಗಿ ಹಿಡಿದುಕೊಂಡಿದ್ದರೆ, ಇಂದ್ರಿಯಗಳೆಂಬ ಕುದುರೆಗಳು ನಿರ್ದಿಷ್ಟ ಮಾರ್ಗದಲ್ಲಿ ಮುಂದೆ ಸಾಗುತ್ತವೆ. ಆಗ ಯಜಮಾನ ಅಥವಾ ಜೀವಿಯು, ಪರಮಪದವನ್ನು ಸೇರುತ್ತಾನೆ.

ಈ ಪ್ರಯಾಣವನ್ನು ಕಠೋಪನಿಷತ್ತು ಕತ್ತಿಯ ಅಲುಗಿನ ಮೇಲಿನ ನಡಿಗೆಗೆ ಹೋಲಿಸುತ್ತದೆ. ಪ್ರತಿಯೊಂದು ವಿಷಯದಲ್ಲಿಯೂ ಎಚ್ಚರದಿಂದಿರಬೇಕಾಗುತ್ತದೆ—ಕರ್ಮಕ್ಕೆ ಅಥವಾ ಅದರ ಫಲಕ್ಕೆ ಎಂದಿಗೂ ಅಂಟಿಕೊಳ್ಳದಂತಿರಬೇಕಾಗುತ್ತದೆ. ಇದಕ್ಕೆ ಕೌಶಲ ಹಾಗೂ ಸತತ ಪ್ರಯತ್ನಗಳು ಬೇಕು. ಒಂದು ಕ್ಷಣದ ನಿರ್ಲಕ್ಷ್ಯವೂ ಅತಿ ದುಬಾರಿಯಾದೀತು—ಒಂದು ಕೂದಲೆಳೆಯಗಲದ ಜಾರುವಿಕೆಯೂ ತಳವಿಲ್ಲದ ಆಳವನ್ನು ಸೇರುವಂತೆ ಮಾಡೀತು! ಈ ನಿರ್ಲಕ್ಷ್ಯವನ್ನೇ ವೇದಾಂತ ಹಾಗೂ ಬೌದ್ಧ ಶಾಸ್ತ್ರಗ್ರಂಥಗಳು "ಪ್ರಮಾದ" ಎಂದು ಕರೆದಿವೆ.

ಇಂತಹ ಪ್ರಮಾದಕ್ಕೆ ಒಳಗಾಗದವರಲ್ಲಿ ಆಂತರಿಕ ಮತ್ತು ಬಾಹ್ಯ, ಆಧ್ಯಾತ್ಮಿಕ ಅರಿವು ಮತ್ತು ಕರ್ಮಕೌಶಲ, ಲೌಕಿಕ ಮತ್ತು ಪಾರಮಾರ್ಥಿಕ—ಇವುಗಳೆಲ್ಲೆಲ್ಲ ಪರಿಪೂರ್ಣವಾದ ಸಾಮರಸ್ಯ ಕಂಡುಬರುತ್ತದೆ. ಅವರು ಮಾನವತೆಗೆ ಅನುಕರಿಸಲು, ಅನುಸರಿಸಲು, ಕರ್ಮಕೌಶಲದ ಮರ್ಮವನ್ನು ಕಲಿಯಲು ಹಾಗೂ ಧ್ಯಾನಿಸಲು ಯೋಗ್ಯವಾದ ದಿವ್ಯತೆಯ ಪ್ರತೀಕಗಳಾಗಿರುತ್ತಾರೆ.

---

ಕರ್ಮವನ್ನು ಕುಶಲತೆಯಿಂದ ಮಾಡಬೇಕು. ಕರ್ಮಮಾಡುವ ರೀತಿಯನ್ನರಿತವರಿಗೆ ಅತ್ಯಂತ ಮಹತ್ತಾದ ಫಲಪ್ರಾಪ್ತಿಯುಂಟಾಗುತ್ತದೆ. ಮನಸ್ಸಿನಲ್ಲಿ ಮೊದಲೇ ಅಡಗಿರುವ ಶಕ್ತಿಯನ್ನು ಹೊರಗೆಡಹುವುದೇ, ಆತ್ಮನನ್ನು ಎಚ್ಚರಗೊಳಿಸುವುದೇ ಕರ್ಮ ಎಂಬುದನ್ನು ನೀವು ಜ್ಞಾಪಕದಲ್ಲಿಡಬೇಕು. *—ಸ್ವಾಮಿ ವಿವೇಕಾನಂದ.*

*ಸ್ಥಳದಾನ:* ಕನ್ಹೈಯಲಾಲ್ ಮತ್ತು ಕಂಪನಿ, ಬೆಂಗಳೂರು